ಅಧ್ಯಕ್ಷರು.—ದಯವಮಾಡಿ ಆ ಮೇಲೆ ನನ್ನನ್ನ ಭೇಟಿ ಮಾಡಿ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯಲ್ಲಿ ಕೆಲವು ಜನರು ಉಪವಾಸ ಮಾಡುತ್ತಿದ್ದಾರೆ. ಧರಣಿ ಕುಳಿತಿದ್ದಾರೆ. ಆ ವಿಚಾರದಲ್ಲಿ ನಾನು ತಮಗೆ ಕಾಲಿಂಗ್ ಅಟೆನ್‌ಷನ್ ಮೋಷನ್ ಕೊಟ್ಟಿದ್ದೇನೆ.

ಅಧ್ಯಕ್ಷರು. ಈಗ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಮಾನ್ಯ ಬೆಟ್ಟಸ್ವಾಮಿಗೌಡರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

CALLING ATTENTION TO MATTERS OF URGENT PUBLIC IMPORTANCE

(*i*) *re: Need to rehabilitation of villagers of Magadi Taluk whose lands would submerged under Manchanabele Project.*

SRI BETTASWAMY GOWDA(Magadi).—I call the attention of the Chief Minister to the urgent need for rehabilitation of the people of these villagers viz. Averahalli. Veerapura and Vodrahalli in Magadi Taluk which would be submerged under the Manchanabele Project.

SRI D. DEVARAJ URS(Chief Minister).—Sir, I wish to make the following statement.

Manchanabele Project has been formed by Government in No. PWD 7 GIP 78 dated 21st October 1978. The Committee consists of the following members as per the Government Order :—

OFFICIAL MEMBERS :

1) The Deputy Commissioner, Bangalore District, Bangalore.	...	Chairman
2) The Assistant Commissioner, Ramanagaram Sub Division, Ramanagaram.	...	Member-Secretary
3) The Special Deputy Commissioner, Bangalore District, Bangalore	...	Member
4) The Executive Engineer, Manchanabele Project Division, Ramanagaram,	...	,,
5) The Divisional Forest Officer, Bangalore Division, Bangalore.	...	,,
6) The District Health Officer, Bangalore	...	,,

NON-OFFICIAL MEMBERS :

1) Sri Bettaswamy Gowda, M.L.A Magadi Taluk	...	,,
2) The President, Taluk Development Board, Magadi Taluk.	...	,,
3) Sri Malle Gowda, Manchanabele village.	...	,,

4) Sri A. B. Nanjundaiah, Averahalli ... Member
5) Sri Nanjappa, Veerapura ... ,,
6) Sri Patel N Narase Gowda, Manchanabele, Magadi Taluk ... ,,
7) Sri Nanjappa, Averahalli, Manchanabele Magadi Taluk ... ,,

The three villages, namely Averahalli, Veerapura and Oderahalli come under submersion under Manchanabele project. To rehabilitate the villages, action has already been taken by Rehabilitation Committee.

The first meeting of the Committee was conducted on 23rd November 1978 and the details of the extent of lands coming under submersion as well as the lands left over without submersion have been collected and the villages have also b en inspected by the Committee on 12th December 1978. It was also decided by the Committee that even the areas that may not come under submersion have also to be acquired since these lands are not easily accessible. Savanadurga State Forest was also inspected as to the suitability for rehabilitating the displaced persons.

In the second meeting of Rehabilitation Committee held on 6th February 1979, the following decisions were taken:

1) To compare the list of families of the villages coming under submersion prepared by the Manchanabele Project Division Office and the Tahsildar, Magadi Taluk, and a final list to be got up and circulated among the Members,
2) To grant a minimum land of 5.00 acres to each of the families in all the villages including landless agricultural labourers coming under submersion.
3) The list of families furnished by the Manchanabele Project Division is 231 families which have to be rehabilitated, Pending finalisation of list of families, it was decided to select suitable lands to the extent of 1250 acres at 5 acres per family for 250 families. In order to provide public amenities like temple, school, playground, roads, etc., another 50 acres of land is needed, and hence total 1300 acres of land be acquired for the rehabilitation of the above villages.
4) To inspect the lands in Hejjala and Hanumadurga on 21st February 1979 by the Chairman and the Members of the Rehabilitation Committee for selection of lands for Rehabilitation Colony.

5) To prepare a layout plan for construction of houses for 250 families by the Executive Engineer, Manchanabele Project Division.

The work of cut off trench of the earthen dam portion in the river is now under progress and this portion of work is proposed to be completed by the end of May 1979. It is programmed to take up the work o f earthen dam in the month of December 1979 and the initial impounding will start by June 1980. Therefore, the rehabilitation work will be completed by that time without inconveniencing the people of the above three villages.

ಶ್ರೀ ಬೆಟ್ಟಸ್ವಾಮಿಗೌಡ.—ಸ್ವಾಮಿ, ಈ ಮಂಚನಬೆಲೆ ಆಣೆಕಟ್ಟು ಪ್ರಾರಂಭವಾಗಿ ಈಗ ಅಲ್ಲಿ ನೀರನ್ನು ನಿಲ್ಲಿಸುವ ಸ್ಟೇಜ್‌ಗೆ ಅದು ಬಂದಿದೆ, ಅದರಲ್ಲಿ ಮುಳುಗಡೆ ಆಗತಕ್ಕಂಥ ರೈತರಿಗೆ ತಕ್ಷಣವೇ ಬೇರೆ ವ್ಯವಸೆ ಮಾಡಿ ಅವರಿಗೆ ಮನೆ ಕಟ್ಟಿಕೊಡದೇ ಹೋದರೆ, ಅವರ ಜಮೀನುಗಳಿಗೆ ಪರಿಹಾರ ಕೊಡದೇ ಹೋದರೆ ಅವರು ಬೇರೆ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ತೊಂದರೆಯಾಗುವುದಿಲ್ಲವೇ? ಈ ಕೆಲಸವನ್ನು ಯಾವಾಗ ಮಾಡುತ್ತೀರಿ? ಎಷ್ಟು ಬೇಗ ಮಾಡುತ್ತೀರಿ ಎಂಬುದನ್ನು ತಿಳಿಸುತ್ತೀರಾ?

SRI D. DEVARAJ URS.—I do not know whether he followed my statement. I would therefore reply to him in Kannada. ಇದರಲ್ಲಿ ೧೩೦೦ ಎಕರೆ ಜಮೀನುಗಳನ್ನು ಆಕ್ವೈರ್ ಮಾಡಿಕೊಳ್ಳಬೇಕೆಂದು ಮತ್ತು ೨೫೦ ಕುಟುಂಬಗಳಿಗೆ ರಿಹ್ಯಾಬಿಲೀಟೇಟ್ ಮಾಡಬೇಕೆಂದು ಇದ್ದಾರೆ. ಮಂಚನಬೆಲೆ ಪ್ರಾಜೆಕ್ಟ್‌ನಲ್ಲಿ ಇವೆಲ್ಲಾ ಮುಳುಗಡೆಯಾಗುವುದಕ್ಕೆ ಮುಂಚಿತವಾಗಿ ಒಂದು ವರ್ಷದೊಳಗೆ ಈ ಕೆಲಸವನ್ನು ಪೂರೈಸಬೇಕೆಂಬುದಾಗಿ ಕಮಿಟಿಯವರು ಒಂದು ಡಿಸಿಷನ್ ತೆಗೆದುಕೊಂಡಿದ್ದಾರೆ. ಈ ವಿಚಾರಕ್ಕೆ ಅವರು ನಿಗಾ ಕೊಟ್ಟಿದ್ದಾರೆ.

ಶ್ರೀ ಬೆಟ್ಟಸ್ವಾಮಿಗೌಡ.—ಸ್ವಾಮಿ ಇಷ್ಟೆಲ್ಲಾ ಆದರೂ ಕೂಡ ಕೆಲವರ ಜಮೀನುಗಳನ್ನು ಇದುವರೆಗೂ ಅಲ್ಲಿ ವಶಕ್ಕೆ ತೆಗೆದುಕೊಂಡಿಲ್ಲ. ರಾಮನಗರದ ಅಸಿಸ್ಟೆಂಟ್ ಕಮೀಷನರ್ ಆಫೀಸಿನಲ್ಲಿ ಈ ಬಗ್ಗೆ ರಿಕಾರ್ಡ್ಸ್ ಪೆಂಡಿಂಗ್ ಇದೆ. ಅವರಿಗೆ ಕೊಡುವುದಕ್ಕೆ ಹಣವಿದ್ದರೂ ಕೂಡ ಕೆಲವರಿಗೆ ಪರಿಹಾರದ ಹಣ ಕೊಟ್ಟಿಲ್ಲ.

ಶ್ರೀ ಡಿ. ದೇವರಾಜಅರಸ್.—ಅವರಿಗೆ ಹಣ ಕೊಡುವುದರಲ್ಲಿ ಅಂತಹ ಅಪಾಯ ಏನೂ ಇಲ್ಲ. ಅವರಲ್ಲಿ ಕೆಲವರು ಹಣವನ್ನು ತೆಗೆದುಕೊಂಡು ಬಿಟ್ಟು ಆಮೇಲೆ ಇಲ್ಲ ಎಂದು ಹೇಳಿದ್ದಾರೆ. ಈ ಬಗೆ ನಮಗೆ ಸಾಕಷ್ಟು ಅನುಭವವಾಗಿದೆ. In other areas where we paid the money in advance, the people after utilising the money again started agitation for payment of compensation. In this respect, I cannot give a promise to say that I will give them all the money now. Money will be paid to them at the appropriate time. We will take all steps for the construction of the village so that they should be in a position to go there ; and even the lands will be given to them.

ಶ್ರೀ ಬೆಟ್ಟಸ್ವಾಮಿಗೌಡ.—ಅಲ್ಲಿ ಬಾವಿ ಕಟ್ಟಿಕೊಂಡು ವ್ಯವಸಾಯ ಮಾಡುತ್ತಿದ್ದಂಥವರಿಗೆ ಮತ್ತು ಪಂಪ್‌ಸೆಟ್ ಇಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದಂಥವರಿಗೆ ಬಾಗಾಯತು ದರದಲ್ಲಿ ಅವರಿಗೆ ಪರಿಹಾರ ಕೊಡಿಸುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ?

SRI D. DEVARAJ URS.—I cannot answer that question. ಬಾಗಾಯತು ಇದ್ದರೆ ಬಾಗಾಯತು ದರ ಕೊಡುತ್ತೇವೆ ; ಬರೀ ಕಾಂಪನ್‌ಸೇಷನ್ ಇದ್ದರೆ ಕಾಂಪನ್‌ಸೇಷನ್ ಕೊಡುತ್ತೇವೆ. ಈಗಾಗಲೇ ತೆಗೆದುಕೊಂಡಿರುವವರು ತೆಗೆದುಕೊಂಡುಬಿಟ್ಟಿದ್ದಾರೆ, ಪೂರ್ಣ ಸದಸ್ಯರಿಗೂಗೊತ್ತು He is also a member of the Rehabilitation Committee.

ಅಧ್ಯಕ್ಷರು.—ನಿಮಗೆ ಇನ್ನು ಏನು ಸಮಸ್ಯೆಗಳು ಇದ್ದರೂ ಆಮೇಲೆ ಅವರನ್ನು ಕೇಳಿ ತಿಳಿದು ಕೊಳ್ಳಿ. ಈಗ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರ ಗಮನ ಸೆಳೆಯುವ ಸೂಚನೆಯನ್ನು ತೆಗೆದು ಕೊಳ್ಳೋಣ.

(*ii*) *re: Need to take over the Family and Child Welfare Projects under Govt. control and absorbing its staff into Govt. Service.*

SMT. NAGAMMA C KESHAVAMURTHY(Mayakanda).—I call the attention of the Minister of State for Women and Children Welfare to the urgent need for the Government to take over the Family and Child Welfare Projects under the State Government control and to absorb all the staff of these projects into Government service giving them all consequential benefits.

SMT. MANORAMA MADHVARAJ (Minister of State for Women and hild Welfare).—I wish to state as follows.

ಕರ್ನಾಟಕ ರಾಜ್ಯ ಸರ್ಕಾರ ಸಮಾಜ ಕಲ್ಯಾಣ ಸಲಹಾ ಮಂಡಲಿಯು ೩ಳಿ ಕುಟುಂಬ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸುತ್ತಲಿದೆ. ಪ್ರಾರಂಭದಲ್ಲಿ ಈ ಎಲ್ಲಾ ಯೋಜನೆಗಳನ್ನು ಕೇಂದ್ರ ಸರಕಾರವು ಕೇಂದ್ರ ಸರ್ಕಾರದ ಸಲಹಾ ಮಂಡಲಿಯ ಮೂಲಕ ನಡೆಸುತ್ತಿತ್ತು. ಇದಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಪಾಗು ರಾಜ್ಯ ಸರ್ಕಾರಗಳು ವಹಿಸಿಕೊಂಡಿದ್ದವು. ಈ ಯೋಜನೆಗಳಿಗೆ ತಗಲುವ ಪೂರ್ತಿ ವೆಚ್ಚವನ್ನು ೪ನೇ ಪಂಚವಾರ್ಷಿಕ ಯೋಜನೆಯ ನಂತರ ರಾಜ್ಯ ಸರ್ಕಾರಕ್ಕೆ ವಹಿಸಲಾಗಿದೆ. ಇದಕ್ಕೆ ಅನುಸಾರವಾಗಿ, ರಾಜ್ಯ ಸರ್ಕಾರವು ಎಲ್ಲಾ ಯೋಜನೆಗಳಿಗೆ ತಗಲುವ ವೆಚ್ಚ ಮತ್ತು ಸಿಬ್ಬಂದಿ ವರ್ಗದ ವೇತನವನ್ನು ವಹಿಸಿಕೊಂಡಿದೆ.

ಈ ಯೋಜನೆಗಳಲ್ಲಿ ಒಟ್ಟು ೫೪೮ ಜನ ನೌಕರರು ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದಲ್ಲಿ ಆಡಳಿತ ಪಾಗು ಮೇಲ್ವಿಚಾರಣೆ ಜವಾಬ್ದಾರಿಯನ್ನು ರಾಜ್ಯ ಸರ್ಕಾರವೇ ವಹಿಸಿ ಕೊಳ್ಳಲು ಸಲಹೆ ನೀಡಿತ್ತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ೧೯೭೫ರಲ್ಲಿ ಪ್ರಾರಂಭವಾಗಿದೆ. ಈ ಹೊಸ ಇಲಾಖೆಗೆ ಸಾಕಷ್ಟು ಸಿಬ್ಬಂದಿ ವರ್ಗದ ಕೊರತೆ ಇದ್ದುದರಿಂದ, ಈ ಯೋಜನೆಗಳನ್ನು ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳುವುದನ್ನು ಮುಂದೂಡಲಾಯಿತು. ಈಗ ಈ ಯೋಜನೆಗಳನ್ನು ಸರ್ಕಾರದ ಆಡಳಿತದಲ್ಲಿ ವಹಿಸಿಕೊಳ್ಳುವ ವಿಷಯ ತೀವ್ರವಾಗಿ ಪರಿಶೀಲಿಸಲಾಗುತ್ತಿದೆ. ಶೀಘ್ರವೇ ಎಲ್ಲಾ ವಿಷಯ ಗಳನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತೆ.

ಈಗ ಈ ಸಿಬ್ಬಂದಿವರ್ಗದವರು ಸರ್ಕಾರಿ ವರ್ಗದವರ ವೇತನವನ್ನೇ ಪಡೆಯುತ್ತಿದ್ದಾರೆ.

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ.—ಶೀಘ್ರವೇ ಎಲ್ಲ ವಿಷಯಗಳನ್ನೂ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಈ ವಿಷಯವನ್ನು ನಾನು ಹಿಂದಿನ ವರ್ಷದ ಬೇಡಿಕೆಯ ಮೇಲಣ ಚರ್ಚೆಯಲ್ಲೂ ಪ್ರಸ್ತಾಪ ಮಾಡಿದ್ದೆ. ಇಲಾಖೆಯಲ್ಲಿ ೩೪ ಪ್ರಾಜೆಕ್ಟ್‌ಗಳಿದ್ದು ೫೪೮ ಒಟ್ಟು ಜನ ಸಿಬ್ಬಂದಿ ಇರುವರೆಂದು ಮಾನ್ಯ ಸಚಿವೆಯವರು ತಿಳಿಸಿದರು. ಇವರಲ್ಲಿ ತೊಂಬತ್ತು ಭಾಗ ಮಹಿಳೆಯರಿದ್ದಾರೆ. ಇವರಲ್ಲಿ ಬಹುಪಾಲು ವಿಧವೆಯರು, ಗಂಡ ಬಿಟ್ಟಿರುವವರು ಮತ್ತು ನಿರ್ಗತಿಕರು ಈ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ೫೪೮ ಮಂದಿಯಲ್ಲಿ ಈಗ ೪೦ ಮಂದಿ ನಿವೃತ್ತರಾಗಿದ್ದು, ಕಳೆದ ಇಪ್ಪತ್ತಮೂರು ವರ್ಷಗಳಿಂದ ಕೆಲಸ ಮಾಡಿದ ಇವರನ್ನು ಇಂದು ಬರೀ ಕೈಯಲ್ಲಿ ಮನೆಗೆ ಕಳುಹಿಸಲಾಗುತ್ತಿದೆ. ಇವರುಗಳಿಗೆ ಕರ್ನಾಟಕ ಸೇವಾ ನಿಯಮಗಳನ್ನು ಅನ್ವಯಿಸಿ ದ್ದರೂ ನಿವೃತ್ತಿ ವೇತನ ಸೌಲಭ್ಯವನ್ನು ಕೊಟ್ಟಿಲ್ಲ. ಇತ್ತೀಚೆಗೆ ನನಗೊಂದು ವಿಷಯ ತಿಳಿದು ಬಂತು. ಅದೇನೆಂದರೆ, ನೆಲಮಂಗಲದ ಶ್ರೀ ಚಂದ್ರಶೇಖರಯ್ಯ ಎನ್ನುವವರು ಈ ವಿಭಾಗದಲ್ಲಿ ಅಕೌಂಟೆಂಟ್ ಆಗಿ ೨೪ ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಈಗ ಅವರಿಗೆ ಪ್ಯಾರಲಿಸಿಸ್ ಸ್ಟ್ರೋಕ್ ಹೊಡೆದಿದೆ.